# ಪಯಾಖಲಿ!

# ಅಂತರಿಕ್ಷದಲ್ಲಿ ಮಾನವ

## 60 ವರ್ಷಗಳ ಸಾಹಸ ಕಥನ



ಮನುಷ್ಯನ ಚೊಚ್ಚಲ ಬಾಹ್ಯಾಕಾಶದ ಯಾನಕ್ಕೀಗ 60 ವರ್ಷ. ರಷ್ಯಾದ ಯೂರಿ ಗಗಾರಿನ್ 1961ರ ಏಪ್ರಿಲ್ 12ರಂದು ಚಾರಿತ್ರಿಕ ಅಂತರಿಕ್ಷಯಾತ್ರೆಯನ್ನು ಯಶಸ್ವಿಯಾಗಿ ಕೈಗೊಂಡಿದ್ದ. ಅಂತರಿಕ್ಷಕ್ಕೆ ತೆರಳಿದ ಮೊದಲ ಮಾನವ ಎನ್ನುವ ಹಿರಿಮೆ ಚರಿತ್ರೆಯಲ್ಲಿ ದಾಖಲಾದ ಆ ದಿನಕ್ಕೆ ಈಗ ಅರವತ್ತನೇ ವಾರ್ಷಿಕೋತ್ಸವ. ಕಳೆದ ಆರು ದಶಕಗಳ ಅವಧಿಯಲ್ಲಿ ಬಾಹ್ಯಾಕಾಶ ಕ್ಷೇತ್ರದಲ್ಲಿ ಮನುಷ್ಯ ಅನೇಕ ವಿಜಯ ಪತಾಕೆಗಳನ್ನು ನೆಟ್ಟಿದ್ದಾನೆ. ‘ಚಂದ್ರ ಸ್ಪರ್ಧೆ’ ಚಂದ ಸ್ಪರ್ಧೆಯಾಗಿ ಹೊಸ ಕನಸುಗಳ ಬೀಜ ಬಿತ್ತಿದೆ. ಅಂತರರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣದಲ್ಲಿ ಬಾಹ್ಯಾಕಾಶ ಯಾತ್ರಿಗಳು ತಿಂಗಳುಗಟ್ಟಲೆ ನೆಲೆಸಿ ಅಧ್ಯಯನ ನಡೆಸುತ್ತಿದ್ದಾರೆ. ಮನುಷ್ಯನ ಆಸೆಗಣ್ಣು ಮಂಗಳನತ್ತಲೂ ಹರಿದಿದೆ. ಆರು ದಶಕಗಳ ಅವಧಿಯಲ್ಲಿ ಅಂತರಿಕ್ಷದಲ್ಲಿ ಮನುಷ್ಯ ನಡೆಸಿದ ಸಾಹಸಗಾಥೆಗಳ ಈ ಕಥನ, ನಾಳೆಗಳ ಸಾಧ್ಯತೆಗಳತ್ತಲೂ ಗಮನಸೆಳೆಯುವಂತಿದೆ.

■ ಡಾ ಬಿ.ಆರ್. ಗುರುಪ್ರಸಾದ್